# ಜ್ಞಾನಿಯು ಎಂದಿಗೂ ತಪ್ಪು ಹೆಜ್ಜೆ ಇಡುವುದೇ ಇಲ್ಲ



ಸ್ವಾಮಿ ಅಭೇದಾನಂದ

ಕಾಳೀಪ್ರಸಾದನು (ಮುಂದೆ ಸ್ವಾಮಿ ಅಭೇದಾನಂದ) ಕಾಶೀಪುರದ ತೋಟದ ಮನೆಯಲ್ಲಿ ಶ್ರೀರಾಮಕೃಷ್ಣರ ಕೊನೆಯ ದಿನಗಳಲ್ಲಿ ಅವರ ಸೇವೆಯಲ್ಲಿ ನಿರತನಾಗಿದ್ದ. ತೋಟದ ಆವರಣದಲ್ಲಿ ತುಂಬ ಮೀನುಗಳಿದ್ದ ಎರಡು ಕೊಳಗಳಿದ್ದವು. ಕಾಳಿ ಒಳ್ಳೆಯ ಮೀನುಗಾರ. ಒಂದು ದಿನ ಅವನು ಕೆಲವು ಮೀನುಗಳನ್ನು ಹಿಡಿದನೆಂಬ ಸಂಗತಿ ಶ್ರೀರಾಮಕೃಷ್ಣರಿಗೆ ತಿಳಿಯಿತು. ಸಂಜೆ ಕಾಳಿ ತಮ್ಮ ಸೇವೆ ಮಾಡುತ್ತಿರುವಾಗ "ನೀನು ಗಾಳಹಾಕಿ ಮೀನು ಹಿಡಿಯುತ್ತಿರುವುದು ನಿಜವೆ?" ಎಂದು ಅವರು ಅವನನ್ನು ಕೇಳಿದರು. "ಹೌದು ಸ್ವಾಮಿ" ಎಂದ ಶಿಷ್ಯ. ಶ್ರೀರಾಮಕೃಷ್ಣರು "ಗಾಳ ಹಾಕಿ ಮೀನು ಹಿಡಿಯುವುದು ಪಾಪಕಾರ್ಯ; ಏಕೆಂದರೆ ಆ ಮೂಲಕ ಜೀವಿಗಳನ್ನು ಸಾಯಿಸಿದಂತಾಗುತ್ತದೆ" ಎಂದರು.

ಆದರೆ ಕಾಳಿ ತಾನು ಮಾಡುತ್ತಿದ್ದುದನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಗೀತೆಯಿಂದ ಒಂದು ಶ್ಲೋಕವನ್ನು ಉದ್ಧರಿಸಿದ: **ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ। ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ** ॥ (೨.೧೯) —"ಈತನು ಕೊಲ್ಲುವವನೆಂದು ಯಾವನು ತಿಳಿಯುತ್ತಾನೋ ಮತ್ತು ಈತನು ಕೊಲ್ಲಲ್ಪಟ್ಟವನೆಂದು ಯಾವನು ಭಾವಿಸುತ್ತಾನೋ ಆ ಇಬ್ಬರೂ ಅರಿಯರು. ಈ ಆತ್ಮನು ಕೊಲ್ಲುವುದೂ ಇಲ್ಲ, ಕೊಲ್ಲಲ್ಪಡುವುದೂ ಇಲ್ಲ" ಎಂದಮೇಲೆ ಮೀನು ಹಿಡಿಯುವುದು ಏಕೆ ಪಾಪವಾಗಬೇಕು ಎಂಬುದು ಕಾಳಿಯ ವಾದವಾಗಿತ್ತು.

ಶಿಷ್ಯನ ವಾದವನ್ನು ಕೇಳಿ ಶ್ರೀರಾಮಕೃಷ್ಣರು ನಕ್ಕು ಅನೇಕ ರೀತಿಗಳಲ್ಲಿ ಅವನಿಗೆ ಅರ್ಥ ಮಾಡಿಸಲು ಪ್ರಯತ್ನಪಟ್ಟರು. "ನಿಜವಾದ ಜ್ಞಾನವನ್ನು ಪಡೆದವನು ಎಂದಿಗೂ ತಪ್ಪು ಹೆಜ್ಜೆ ಇಡುವುದಿಲ್ಲ" ಎಂದರು. ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ಕೆಮ್ಮಲಾರಂಭಿಸಿದರು. ಶ್ಲೇಷ್ಮದಲ್ಲಿ ರಕ್ತ ಕಾಣಿಸಿಕೊಂಡಿತು. ಇದರಿಂದ ಹೆದರಿದ ಕಾಳಿ "ಸ್ವಾಮಿ, ಮಾತನಾಡುವುದರಿಂದ ನಿಮ್ಮ ಕ್ಯಾನ್ಸರ್ ಉಲ್ಬಣಗೊಳ್ಳುತ್ತದೆ. ದಯವಿಟ್ಟು ಮಾತನಾಡಬೇಡಿ" ಎಂದು ಬೇಡಿಕೊಂಡ. ಶ್ರೀರಾಮಕೃಷ್ಣರೆಂದರು: "ನಿನ್ನನ್ನು ತುಂಬ ಬುದ್ಧಿವಂತ ಹುಡುಗ ಎಂದುಕೊಂಡಿದ್ದೇನೆ. ನಾನು ಹೇಳಿದ್ದನ್ನೇ ಅನುಸಂಧಾನ ಮಾಡಿದರೆ ನಿನಗೆ ಅರ್ಥವಾಗುತ್ತದೆ."

ಶ್ರೀರಾಮಕೃಷ್ಣರು ಹೇಳಿದಂತೆಯೇ ಕಾಳಿ ಮೂರು ದಿನಗಳು ಧ್ಯಾನಮಾಡಿ ಅವರ ಮಾತಿನ ಹಿಂದಿರುವ ಅರ್ಥವನ್ನು ತಿಳಿದುಕೊಂಡ. ನಂತರ ಶ್ರೀರಾಮಕೃಷ್ಣರ ಹತ್ತಿರ ಹೋಗಿ ಹೇಳಿದ: "ಸ್ವಾಮಿ, ನಾನೀಗ ಮೀನು ಹಿಡಿಯುವುದೇಕೆ ಕೆಟ್ಟದ್ದು ಎಂಬುದನ್ನು ಮನಗಂಡಿದ್ದೇನೆ. ಇನ್ನು ನಾನು ಹಾಗೆ ಮಾಡುವುದಿಲ್ಲ. ದಯವಿಟ್ಟು ನನ್ನನ್ನು ಕ್ಷಮಿಸಿ." ಇದನ್ನು ಕೇಳಿ ಶ್ರೀರಾಮಕೃಷ್ಣರಿಗೆ ಬಹಳ ಸಂತೋಷವಾಯಿತು. ಅವರೆಂದರು: "ಈ ರೀತಿ ಮೀನು ಹಿಡಿಯುವುದು ಮೋಸಗಾರಿಕೆ. ಆಕರ್ಷಕ ಆಹಾರದೊಳಗಡೆ ಕೊಕ್ಕೆಯನ್ನಿಟ್ಟು ಇಳಿಬಿಡುವುದೆಂದರೆ ಆಹಾರದಲ್ಲಿ ವಿಷವನ್ನು ಅಡಗಿಸಿ ಆಹ್ವಾನಿತ ಅತಿಥಿಗೆ ಬಡಿಸಿದಂತೆ. ಎರಡೂ ಒಂದೇ ರೀತಿಯ ಪಾಪಗಳು." ಕಾಳಿ ವಿನೀತನಾಗಿ ಅವರು ಹೇಳಿದ್ದನ್ನು ಒಪ್ಪಿಕೊಂಡ; ಮನಸ್ಸಿನಲ್ಲಿ ಅನಂತ ದಯೆ ಹುಟ್ಟಿಕೊಂಡಿತು. ಶ್ರೀರಾಮಕೃಷ್ಣರು "ಆತ್ಮ ಸಾಯುವುದೂ ಇಲ್ಲ, ಸಾಯಿಸಲ್ಪಡುವುದೂ ಇಲ್ಲ ಎಂಬುದೇನೋ ಸರಿ. ಆದರೆ ಯಾರು ಈ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿರುವರೋ ಅವರೇ ಆತ್ಮವಾಗಿರುವಾಗ ಇತರರನ್ನು ಕೊಲ್ಲುವ ಪ್ರವಣತೆ ಅವರಿಗೆ ಬರುವುದು ಹೇಗೆ? ಕೊಲ್ಲುವ ಇಚ್ಛೆ ಇರುವವರೆಗೆ ಅವರು ಆತ್ಮದೊಂದಿಗೆ ಐಕ್ಯಗೊಂಡಿಲ್ಲ; ಅವರಿಗೆ ಆತ್ಮಜ್ಞಾನ ಲಭಿಸಿಲ್ಲ. ಅದಕ್ಕೇ ನಾನು ನಿಜವಾದ ಜ್ಞಾನವನ್ನು ಯಾರು ಪಡೆದಿರುವರೋ ಅವರು ತಪ್ಪು ಹೆಜ್ಜೆ ಇಡುವುದೇ ಇಲ್ಲ ಎಂದು ಹೇಳುವುದು. ಆತ್ಮವೆಂದರೆ ದೇಹದಿಂದ, ಇಂದ್ರಿಯಗಳು, ಮನಸ್ಸು, ಬುದ್ಧಿಗಳಿಗೆ ಅತೀತವಾಗಿದ್ದು ಎಲ್ಲ ವಿದ್ಯಮಾನಗಳಿಗೂ ಸಾಕ್ಷಿಯಾಗಿರುವುದೇ ಆತ್ಮ ಎಂಬುದನ್ನು ನೀನು ಮನಗಾಣಬೇಕು" ಎಂದರು. ಶ್ರೀರಾಮಕೃಷ್ಣರ ನುಡಿಗಳು ಕಾಳಿಯ ಹೃದ್ಗತವಾದವು; ಅವನು ಸತ್ಯ ಸಾಕ್ಷಾತ್ಕಾರ ಮಾಡಿಕೊಂಡನು.